# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 286/2018

ಸಿಡಬ್ಲ್ಯೂ-8 ಪಿಡಬ್ಲ್ಯೂ-5

| | | |
|---|---|---|
| ಹೆಸರು | : | ಶ್ರೀ ಸೈಫುಲ್ಲಾ |
| ತಂದೆಯ ಹೆಸರು | : | ಮುನ್ನಾವರ ಪಾಷಾ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ ಸ್ಥಳ | : | ಸೇಡಂ |

ದಿನಾಂಕ 15.10.2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಸಹಾಯಕ ಅಭಿಯೋಜಕರವರಿಂದ**

ಈಗ 5 ವರ್ಷಗಳ ಹಿಂದೆ ಸಾಯಂಕಾಲ ನಾನು ಮತ್ತು ನನ್ನ ಗೆಳೆಯರಾದ ಪವನ, ನಯನ, ಸೋಹೆಲ್, ಮಹ್ಮದ ಫರಾಜ ಇವರು ಕೂಡಿಕೊಂಡು ಮೂರು ಮೋಟಾರ ಸೈಕಲ ಮೇಲೆ ಸೇಡಂದಿಂದ ರಂಜೋಳ ಗ್ರಾಮಕ್ಕೆ ಹೋಗಿದ್ದು ಮರಳಿ ಬರುತ್ತಿದ್ದೇವು. ಆಗ ರಂಜೋಳ ಕ್ರಾಸ ಹತ್ತಿರ ನಮ್ಮ ಮೂರು ವಾಹನಗಳ ಪೈಕಿ ಒಂದು ವಾಹನದ ಅಪಘಾತ ಆಗಿತ್ತು. ಆರೋಪಿ ಪಲ್ಸರ ವಾಹನ ಚಲಾಯಿಸುತ್ತಿದ್ದನು. ಆರೋಪಿಯ ಮೋಟಾರ ಸೈಕಲ ಹಿಂದುಗಡೆ ಖಾಲೀದ ಸೈಫುಲ್ಲಾ ಇವರು ಕುಳಿತ್ತಿದ್ದರು. ನಮ್ಮ ವಾಹನ ಆರೋಪಿಯ ವಾಹನದಿಂದ 200 ಮೀ. ಹಿಂದೆ ಇದ್ದು ಅಪಘಾತ ಹೇಗೆ ಆಗಿರುತ್ತದೆ ಎಂದು ಗೊತ್ತಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ನಂತರದಲ್ಲಿ ಆರೋಪಿಯನ್ನು ಸೇಡಂ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇನೆ. ಆರೋಪಿಗೆ ಕಾಲಿಗೆ ಪೆಟ್ಟಾಗಿತ್ತು ಅವರು ಬೇಹೋಷ ಇದ್ದರು. ಖಾಲೀದ ಸೈಫುಲ್ಲಾ ಇವರಿಗೆ ತಲೆಗೆ ಪೆಟ್ಟಾಗಿತ್ತು. ಅವರು ಅಪಘಾತದ ಗಾಯಗಳಿಂದ ಗುಲಬರ್ಗಾ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆ. ಘಟನೆಯ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸರಕಾರಿ ಸಹಾಯಕ ಅಭಿಯೋಜಕರವರಿಂದ**

ಆ ದಿವಸ ನಾವು ದಿನಾಂಕ 21.03.2018 ರಂದು ಸಾಯಂಕಾಲ 06.00 ಗಂಟೆಗೆ ರಂಜೋಳ ಗ್ರಾಮಕ್ಕೆ ಹೋಗಿ ರಾತ್ರಿ ಮರಳಿ ಬರುತ್ತಿದ್ದೇವು ಎಂದರೆ ಸರಿ. ಒಂದು ಮೋಟಾರ ಸೈಕಲ ಮೇಲೆ ನಾನು ಮತ್ತು ಪವನ, 2 ನೇ ಮೊಟಾರ ಸೈಕಲ ಮೇಲೆ ನಯನ ಮತ್ತು ಸೊಹೇಲ ಇವರು

ಕುಳಿತ್ತಿದ್ದರು, 3 ನೇ ಮೊಟಾರ ಸೈಕಲ ನಂ. KA–32 EK–307 ಇತ್ತು ಎಂದರೆ ನನಗೆ ಗೊತ್ತಿಲ್ಲ. ಆ ಮೋಟಾರ ಸೈಕಲ ಮೇಲೆ ಆರೋಪಿ ಮತ್ತು ಖಾಲೀದ ಸೈಪುಲ್ಲಾ ಕುಳಿತು ಹೊರಟಿದ್ದರು ಎಂದರೆ ಸರಿಯಲ್ಲ. ರಾತ್ರಿ 07.30 ಗಂಟೆಗೆ ರಂಜೋಳ ಕಡೆಯಿಂದ ಸೇಡಂ ಕಡೆಗೆ ಬರುತ್ತಿರುವಾಗ ಆರೋಪಿ ಮೋಟಾರ ಸೈಕಲನ್ನು ಅತೀ ಜೋರಿನಿಂದ ನಿಷ್ಕಾಳಜೀತನದಿಂದ ಚಲಾಯಿಸುತ್ತಿದ್ದನು ಎಂದರೆ ಸರಿಯಲ್ಲ. ಹಾಗೇ ಚಲಾಯಿಸಿಕೊಂಡು ವಾಹನವನ್ನು ಕೊಡಂಗಲ್ ರೋಡಿನ ರಂಜೋಳ ಕ್ರಾಸ್ ಹತ್ತಿರ ಮಕ್ಬೂದ ಮುನಿಮ್ ಇವರ ಹೊಲದ ಹತ್ತಿರ ನಾಲೆಯಲ್ಲಿ ಅಪಘಾತಪಡಿಸಿದ್ದನು ಎಂದರೆ ನಾನು ನೋಡಿಲ್ಲ. ಅಪಘಾತವು ಆರೋಪಿಯ ದುಡುಕುತನದ ಚಾಲನೆಯಿಂದ ಆಗಿರುತ್ತದೆ ಎಂದು ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ–5 ಎಂದು ಗುರುತಿಸಲಾಯಿತು. ಆರೋಪಿ ನನ್ನ ಗೆಳೆಯನಾಗಿರುವುದರಿಂದ ಅವನಿಗೆ ಶಿಕ್ಷೆಯಾಗಬಾರದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ.ಸರಿ ಇದೆ.

ಸಹಿ/-
ಪ್ರ. ದ. ನ್ಯಾ ದಂ. ಸೇಡಂ.

*SYH*

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 286/2018

ಸಿಡಬ್ಲ್ಯೂ- 10 ಪಿಡಬ್ಲ್ಯೂ-6

ಹೆಸರು : ಶ್ರೀ ನಯನ
ತಂದೆಯ ಹೆಸರು : ಮೋಹನಕುಮಾರ ಕಟ್ಟಿಮನಿ
ವಯಸ್ಸು : 24 ವರ್ಷ
ಉದ್ಯೋಗ : ವಿದ್ಯಾರ್ಥಿ
ವಾಸ ಸ್ಥಳ : ಸೇಡಂ

ದಿನಾಂಕ 15.10.2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಸಹಾಯಕ ಅಭಿಯೋಜಕರವರಿಂದ**

ದಿನಾಂಕ 21.03.2018 ರಂದು ಸಾಯಂಕಾಲ ನಾನು ಮತ್ತು ನನ್ನ ಗೆಳೆಯ ಖಾಲೀದ ಸೈಪುಲ್ಲಾ, ಸೈಪುಲ್ಲಾ ಮುನ್ನಾವರ ಪಾಷಾ, ಪವನ, ಸೋಹೇಲ, ಮಹ್ಮದ ಎಲ್ಲರೂ ಕೂಡಿಕೊಂಡು ಮೂರು ಮೊಟಾರ ಸೈಕಲ ಮೇಲೆ ಸೇಡಂದಿಂದ ರಂಜೋಳ ಗ್ರಾಮಕ್ಕೆ ಹೋಗಿ ಸೇಡಂಕ್ಕೆ ಮರಳಿ ಬರುತ್ತಿರುವಾಗ ಬಹಳ ಕತ್ತಲೆಯಾಗಿದ್ದು ಆರೋಪಿ ತನ್ನ ಹಿಂದೆ ಖಾಲೀದ ಸೈಪುಲ್ಲಾ ಇವರನ್ನು ಕೂಡ್ರಿಕೊಂಡಿದ್ದು ವಾಹನದ ಸ್ಲಿಪ ಆಗಿ ಬಿದ್ದಿರುತ್ತದೆ. ಆರೋಪಿಗೆ ಕಾಲಿಗೆ ಮತ್ತು ತಲೆಗೆ ಪೆಟ್ಟಾಗಿತ್ತು. ಖಾಲೀದ ಸೈಪುಲ್ಲಾ ಇವರಿಗೆ ತಲೆಗೆ ಪೆಟ್ಟಾಗಿತ್ತು. ನಾನು ಅಪಘಾತವನ್ನು ಕಣ್ಣಾರೆ ಕಂಡಿಲ್ಲ, ಏಕೆಂದರೆ ನಾನು ಅಪಘಾತ ಸ್ಥಳದಿಂದ ಅರ್ಧ ಕಿ.ಮೀ. ದೂರ ಇದ್ದೆ. ನಂತರದಲ್ಲಿ ನಾನು ಸ್ಥಳಕ್ಕೆ ಹೋಗಿ ಗಾಯಗಳುಗಳನ್ನು ಆಸ್ಪತ್ರೆಗೆ ಸೇರಿಕೆ ಮಾಡಿರುತ್ತೇವೆ. ಖಾಲೀದ ಸೈಪುಲ್ಲಾ ಇವರು ಅದೇ ದಿವಸ ಕಲಬುರಗಿಯ ಬಸವೇಶ್ವರ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆ. ಆರೋಪಿ ವಾಹನವನ್ನು ಸಾವಕಾಶವಾಗಿ ಚಲಾಯಿಸುತ್ತಿದ್ದರು. ಘಟನೆಯ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸರಕಾರಿ ಸಹಾಯಕ ಅಭಿಯೋಜಕರವರಿಂದ**

ಆ ದಿವಸ ರಾತ್ರಿ 07.30 ಗಂಟೆಗೆ ರಂಜೋಳ ಕಡೆಯಿಂದ ಸೇಡಂ ಕಡೆಗೆ ನಾವು ಒಟ್ಟಾಗಿ ಬರುತ್ತಿದ್ದೇವು ಎಂದರೆ ಸರಿಯಲ್ಲ. ಆಗ ಆರೋಪಿ ತಾನು ನಡೆಸುತ್ತಿದ್ದ ಮೋಟಾರ ಸೈಕಲ ನಂ. KA-32 EK 307 ನೆದ್ದನ್ನು ಅತೀ ವೇಗ ಹಾಗೂ ನಿಷ್ಕಾಳಜೀತನದಿಂದ ಚಲಾಯಿಸಿ ಸೇಡಂ ಕೊಡಂಗಲ್ ರೋಡಿನ ರಂಜೋಳ ಕ್ರಾಸ ಹತ್ತಿರ ಇರುವ ಮಹ್ಮದ ಮುನಿಮ ಇವರ ಹೊಲದ ಹತ್ತಿರ ನಾಲೆಯಲ್ಲಿ

ಅಪಘಾತಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತವು ಆರೋಪಿಯ ದುಡುಕುತನದ ಚಾಲನೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ಈಗ ಓದಿ ಹೇಳಿದಂತೆ ರಾತ್ರಿ 07.30 ಗಂಟೆಯ ಸುಮಾರಿಗೆ .........................................ಮೃತಪಟ್ಟಿರುತ್ತಾನೆ ಅಂತಾ ವಿಷಯ ತಿಳಿಯಿತು ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಪಿ-6 ಎಂದು ಗುರುತಿಸಲಾಯಿತು. ಆರೋಪಿ ನನ್ನ ಗೆಳೆಯನಾಗಿರುವುದರಿಂದ ಅವನಿಗೆ ಶಿಕ್ಷೆಯಾಗಬಾರದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ.ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 286/2018

ಸಿಡಬ್ಲ್ಯೂ-9 ಪಿಡಬ್ಲ್ಯೂ-7

| | | |
|---|---|---|
| ಹೆಸರು | : | ಶ್ರೀ ಪವನ |
| ತಂದೆಯ ಹೆಸರು | : | ದೇವಿಂದ್ರಪ್ಪ ಓಂಕಾರ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ವಿದ್ಯಾರ್ಥಿ |
| ವಾಸ ಸ್ಥಳ | : | ಸೇಡಂ |

ದಿನಾಂಕ 15.10.2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಸಹಾಯಕ ಅಭಿಯೋಜಕರವರಿಂದ**

ದಿನಾಂಕ 21.03.2018 ರಂದು ಸಾಯಂಕಾಲ ನಾನು ಮತ್ತು ನನ್ನ ಗೆಳೆಯ ಖಾಲೀದ ಸೈಪುಲ್ಲಾ, ಸೈಪುಲ್ಲಾ ಮುನ್ನಾವರ ಪಾಷಾ, ನಯನ, ಸೋಹೇಲ, ಮಹ್ಮದ ಎಲ್ಲರೂ ಕೂಡಿಕೊಂಡು ಮೂರು ಮೊಟಾರ ಸೈಕಲ ಮೇಲೆ ಸೇಡಂದಿಂದ ರಂಜೋಳ ಗ್ರಾಮಕ್ಕೆ ಹೋಗಿ ಸೇಡಂಕ್ಕೆ ಮರಳಿ ಬರುತ್ತಿರುವಾಗ ಬಹಳ ಕತ್ತಲೆಯಾಗಿದ್ದು ಆರೋಪಿ ತನ್ನ ಹಿಂದೆ ಖಾಲೀದ ಸೈಪುಲ್ಲಾ ಇವರನ್ನು ಕೂಡ್ರಿಕೊಂಡಿದ್ದು ವಾಹನದ ಸ್ಲಿಪ ಆಗಿ ಬಿದ್ದಿರುತ್ತದೆ. ಆರೋಪಿಗೆ ಕಾಲಿಗೆ ಮತ್ತು ತಲೆಗೆ ಪೆಟ್ಟಾಗಿತ್ತು. ಖಾಲೀದ ಸೈಪುಲ್ಲಾ ಇವರಿಗೆ ತಲೆಗೆ, ಕೈಗೆ ಪೆಟ್ಟಾಗಿತ್ತು. ನಾನು ಅಪಘಾತವನ್ನು ಕಣ್ಣಾರೆ ಕಂಡಿಲ್ಲ, ಏಕೆಂದರೆ ನಾನು ಅಪಘಾತ ಸ್ಥಳದಿಂದ 200 ಮೀ. ದೂರ ಇದ್ದೆ. ನಂತರದಲ್ಲಿ ನಾನು ಸ್ಥಳಕ್ಕೆ ಹೋಗಿ ಗಾಯಗಳುಗಳನ್ನು ಆಸ್ಪತ್ರೆಗೆ ಸೇರಿಕೆ ಮಾಡಿರುತ್ತೇವೆ. ಖಾಲೀದ ಸೈಪುಲ್ಲಾ ಇವರು ಅದೇ ದಿವಸ ಕಲಬುರಗಿಯ ಬಸವೇಶ್ವರ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆ. ಆರೋಪಿ ವಾಹನವನ್ನು ಸಾವಕಾಶವಾಗಿ ಚಲಾಯಿಸುತ್ತಿದ್ದರು. ಘಟನೆಯ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸರಕಾರಿ ಸಹಾಯಕ ಅಭಿಯೋಜಕರವರಿಂದ**

ಆ ದಿವಸ ರಾತ್ರಿ 07.30 ಗಂಟೆಗೆ ರಂಜೋಳ ಕಡೆಯಿಂದ ಸೇಡಂ ಕಡೆಗೆ ನಾವು ಒಟ್ಟಾಗಿ ಬರುತ್ತಿದ್ದೇವು ಎಂದರೆ ಸರಿಯಲ್ಲ. ಆಗ ಆರೋಪಿ ತಾನು ನಡೆಸುತ್ತಿದ್ದ ಮೋಟಾರ ಸೈಕಲ ನಂ. KA-32 EK 307 ನ್ನೆದ್ದನ್ನು ಅತೀ ವೇಗ ಹಾಗೂ ನಿಷ್ಕಾಳಜೀತನದಿಂದ ಚಲಾಯಿಸಿ ಸೇಡಂ ಕೊಡಂಗಲ್ ರೋಡಿನ ರಂಜೋಳ ಕ್ರಾಸ ಹತ್ತಿರ ಇರುವ ಮಹ್ಮದ ಮುನಿಮ ಇವರ ಹೊಲದ ಹತ್ತಿರ ನಾಲೆಯಲ್ಲಿ

ಅಪಘಾತಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತವು ಆರೋಪಿಯ ದುಡುಕುತನದ ಚಾಲನೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ಈಗ ಓದಿ ಹೇಳಿದಂತೆ ರಾತ್ರಿ 07.30 ಗಂಟೆಯ ಸುಮಾರಿಗೆ .......................................ಮೃತಪಟ್ಟಿರುತ್ತಾನೆ ಅಂತಾ ವಿಷಯ ತಿಳಿಯಿತು ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು. ಆರೋಪಿ ನನ್ನ ಗೆಳೆಯನಾಗಿರುವುದರಿಂದ ಅವನಿಗೆ ಶಿಕ್ಷೆಯಾಗಬಾರದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ.ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH*